ಭೂಸ್ವಾಧೀನ ಪ್ರಕ್ರಿಯೆ ಮುಗಿಯದ ಪ್ರಯುಕ್ತ ಹಾಗೂ ಸಂಬಂಧಪಟ್ಟ ರೈತರು ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ತಂದಿರುವುದರಿಂದ ಸಧ್ಯದಲ್ಲಿ ಕೆಲಸವು ಸ್ಥಗಿತಗೊಂಡಿರುತ್ತದೆ.

ಈ) ನ್ಯಾಯಾಲಯದ ತಡೆಯಾಜ್ಞೆಯನ್ನು ತೆರವುಗೊಳಿಸಿಕೊಂಡು ಭೂಸ್ವಾಧೀನ ಪ್ರಕ್ರಿಯೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಿ ಕೆಲಸವನ್ನು ಶೀಘ್ರಪೂರ್ಣಗೊಳಿಸಲಾಗುವುದು.

ಬಿಜಾಪುರ ತಾಲ್ಲೂಕು ಕನಮಡಿ ಗ್ರಾಮಕ್ಕೆ (ಧರೀ ದೇವರಹಳ್ಳಕ್ಕೆ) ಬಾಂಈಓರ ನಿರ್ಮಾಣ

3284 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ತಾಲ್ಲೂಕು ಕನಮಡಿ ಗ್ರಾಮ ಧರಿದೇವರಹಳ್ಳಕ್ಕೆ ಬಾಂಧಾರ ನಿರ್ಮಾಣದ ಯೋಜನೆಗೆ ಎಂದು ಮಂಜೂರಾತಿ ನೀಡಲಾಗಿದೆ?*

ಆ) *ಈ ಯೋಜನೆಗೆ ಮಂಜೂರು ಮಾಡಿದ ಹಣ ಎಷ್ಟು? ಮತ್ತು ಬಿಡುಗಡೆ ಮಾಡಿದ ಹಣ ಎಷ್ಟು?*

ಇ) *ಈ ಯೋಜನೆಯು ಈಗ ಯಾವ ಹಂತದಲ್ಲಿದೆ? ಹಾಗೂ ಈ ಯೋಜನೆಯು ಪೂರ್ಣಗೊಳ್ಳಲಿಕ್ಕೆ ಬೇಕಾಗುವ ಕಾಲಾವಧಿ ಎಷ್ಟು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಮಂಜೂರಾತಿ ನೀಡಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಯೋಜನೆಯ ಅಂದಾಜು ಪತ್ರಿಕೆ ಹಾಗೂ ನಕ್ಷೆ ತಯಾರಿಸಿ, ಟಿ.ಎ.ಸಿ.ಗೆ ಸಲ್ಲಿಸಲಾಗಿದ್ದು, ಟಿ.ಎ.ಸಿ. ಹಲವು ಆಕ್ಷೇಪಣೆಗಳನ್ನು ತೆಗೆದುಕೊಂಡಿದೆ. ಆಕ್ಷೇಪಣೆಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲಾಗಿದೆ. ಅನುಸರಣಾ ವರದಿಯ ಮೇಲೆ ಟಿ.ಎ.ಸಿ.ಯ ನಿರ್ಧಾರದ ನಂತರ ಯೋಜನೆ ಒಪ್ಪಿಗೆಯಾದಲ್ಲಿ, ತಾಂತ್ರಿಕ ಮಂಜೂರಾತಿ ಪಡೆದು ಕೆಲಸ ಪ್ರಾರಂಭಿಸಲು ಕ್ರಮ ಜರುಗಿಸಲಾಗುವುದು.

ಬಿಜಾಪುರ ತಾಲ್ಲೂಕ ಬಿಜ್ಜರಗಿ ಕೆರೆ

3285 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಿಜಾಪುರ ತಾಲ್ಲೂಕು ಬಿಜ್ಜರಗಿ ಕೆರೆಯ ನಿರ್ಮಾಣಕ್ಕೆ 4 (1) ಹೊರಡಿಸಲಾಗಿದೆಯೇ?*

ಆ) *ಹಾಗಿದ್ದಲ್ಲಿ ಸರ್ಕಾರವು ಇದರ ಬಗ್ಗೆ ಕೈಗೊಂಡ ಕ್ರಮಗಳೇನು?*

ಇ) *ಕೆರೆಯನ್ನು ಎಂದು ಪೂರ್ಣಗೊಳಿಸಲಾಗುವುದು?*

ಈ) ಈ ಕೆರೆಯ ನಿರ್ಮಾಣ ವಿಷಯದಲ್ಲಿ ತಕರಾರುಗಳು ಬಂದಿದೆಯೇ?

ಉ) ಹಾಗಿದ್ದಲ್ಲಿ ಅವುಗಳಿಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಊ) ಈ ಯೋಜನೆಗೆ ಮಂಜೂರಾದ ಹಣ ಎಷ್ಟು? ಮತ್ತು ಖರ್ಚು ಮಾಡಲಾದ ಹಣ ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಈ ಕಾಮಗಾರಿಯ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ 4(1) ಅಧಿಸೂಚನೆ ಹೊರಡಿಸಲಾಗಿದೆ.

ಆ) ಅಂದಾಜು ಪತ್ರಿಕೆ ಮಂಜೂರಾದ ನಂತರ ಟೆಂಡರ್ ಕರೆಯಲಾಗಿತ್ತು. ಭೂಸ್ವಾಧೀನ ತೊಂದರೆಯಿಂದಾಗಿ ಹಲವು ಬಾರಿ ಟೆಂಡರ್ ಮುಂದೂಡಿ, ಕೊನೆಗೆ ರದ್ದುಪಡಿಸಲಾಯಿತು. 4(1) ಅಧಿಸೂಚನೆಯ ನಂತರ ಭೂಸ್ವಾಧೀನ ಪ್ರಕರಣ ಅಸಿಂಧುಗೊಂಡಿದೆ.

ಇ) ದಿನಾಂಕ 21.8.2000ರಂದು ಮುಖ್ಯ ಇಂಜಿನೀಯರರು, ಸಣ್ಣ ನೀರಾವರಿ (ಉ) ವಲಯ, ಬಿಜಾಪುರ ಇವರು ಸ್ಥಳ ಪರಿವೀಕ್ಷಣೆ ಮಾಡಿ ಕೆರೆ ನಿರ್ಮಿಸುವುದು ಸೂಕ್ತವಲ್ಲವೆಂದು ನೀಡಲಾದ ಪರಿವೀಕ್ಷಣಾ ವರದಿಯ ಹಿನ್ನೆಲೆಯಲ್ಲಿ ಈ ಕಾಮಗಾರಿಯನ್ನು ಕೈಬಿಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ.

ಈ) ಬಂದಿದೆ.

ಉ) ಸ್ಥಳ ಪರೀಕ್ಷೆ ಮಾಡಿ ಈ ಕೆರೆ ನಿರ್ಮಾಣದಿಂದ ಮುಳುಗಡೆ ಆಗುವ ಪ್ರದೇಶದಲ್ಲಿ ಎಲ್ಲಾ ಭಾಗದಲ್ಲೂ ಈಗಾಗಲೇ ತೋಟಗಾರಿಕಾ ಬೆಳೆಗಳನ್ನು ಬೆಳೆಯುತ್ತಿರುವುದರಿಂದ ಹಾಗೂ ಮೇಲ್ಗಡೆ ಸುಮಾರು 800 ಮಿ. ಅಂತರದಲ್ಲಿ ಈಗಾಗಲೇ ಒಂದು ಜಿನುಗು ಕೆರೆಯಿದ್ದು ಈ ಭಾಗದ ಜಮೀನುಗಳ ರೈತರು ಅದರ ಲಾಭ ಪಡೆಯುತ್ತಿರುವುದರಿಂದ ಈ ಹೊಸ ಕೆರೆಯ ನಿರ್ಮಾಣವನ್ನು ಕೈಬಿಡುವ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಬೇಕಿದೆ.

ಊ) ಮಂಜೂರಾದ ಅಂದಾಜು ಮೊತ್ತ ರೂ. 22.81 ಲಕ್ಷ ಹಾಗೂ ಯಾವುದೇ ಹಣ ಖರ್ಚಾಗಿರುವುದಿಲ್ಲ.

ಬಿಜಾಪುರ ತಾಲ್ಲೂಕ ಜಾಲಗೇರಿ ಕೆರೆ ನಿರ್ಮಾಣ

3286 - ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ತಾಲ್ಲೂಕು ಜಾಲಗೇರಿ ಗ್ರಾಮಕ್ಕೆ ಸಣ್ಣ ನೀರಾವರಿ ಕೆರೆ ಮಂಜೂರಾಗಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರವು ಈ ಯೋಜನೆಗೆ ಮಂಜೂರು ಮಾಡಿದ ಹಣ ಎಷ್ಟು?